ಸ) ಕಳಕಂಡಂತೆ ಗ್ರಾನೈಟ್ ಶಿಲೆಗಳನ್ನು ಮಂಗಳೂರು ಬಂದರಿನಿಂದ ರಫ್ತು ಮಾಡಲಾಗಿದೆ.

೧೯೮೫–೮೬	೨,೪೬,೫೦೦ ಟನ್
೧೯೮೬–೮೭	೩,೧೬,೦೦೦ ಟನ್
೧೯೮೭–೮೮	೩,೭೭,೦೦೦ ಟನ್

(ಇದರಲ್ಲಿ ತಮಿಳುನಾಡು ಮತ್ತು ಆಂಧ್ರ ಪ್ರದೇಶದಿಂದ ಮಂಗಳೂರು ಬಂದರಿನ ಮೂಲಕ ರಫ್ತಾಗಿರುವ ಪ್ರಮಾಣವೂ ಸೇರಿದೆ).

ರಾಜ್ಯದಲ್ಲಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಪೂರೈಕೆ

೧೦೭. ಶ್ರೀ ಎ. ಕೃಷ್ಣಪ್ಪ. (ವರ್ತೂರು).— ಮಾನ್ಯ ಕೈಗಾರಿಕೆ ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ನೀಡಬೇಕೆಂದು ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು?

ಆ) ಆ ಪೈಕಿ ಮಾರ್ಚ್ ೧೯೯೦ರ ಕೊನೆಯವರಿಗೆ ಎಷ್ಟು ಅರ್ಜಿಗಳಿಗೆ ಮಂಜೂರಾತಿ ನೀಡಲಾಗಿದೆ,

ಇ) ಉಳಿದವರಿಗೆ ಮಂಜೂರಾತಿ ನೀಡದಿರಲು ಕಾರಣವೇನು?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಮಂತ್ರಿಗಳು)

ಅ) ಮಾರ್ಚ್ ೯೦ರ ಅಂತ್ಯದವರೆಗೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ೬೨,೨೪೪ ಅರ್ಜಿಗಳು (ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಸಂಪರ್ಕಕ್ಕಾಗಿ) ಬಂದಿದ್ದವು.

ಆ) ಆ ಪೈಕಿ ಮಾರ್ಚ್ ೯೦ರ ಅಂತ್ಯದವರೆಗೆ ೪೭,೨೬೮ ಅರ್ಜಿಗಳಿಗೆವ ಮಂಜೂರಾತಿ ನೀಡಲಾಗಿದೆ.

ಇ) ಬಾಕಿ ಉಳಿದ ೧೪,೯೭೬ ಅರ್ಜಿಗಳಿಗೆ ಮಂಜೂರಾತಿ ನೀಡದಿರಲು ಮುಖ್ಯ ಕಾರಣಗಳು

೧) ಕೆಲವು ಅರ್ಜಿಗಳು ಮಂಡಳಿಯ ಕಛೇರಿಯಲ್ಲಿ ಇತ್ತೀಚೆಗೆ ನೋಂದಾಯಿಂತವಾಗಿದ್ದು, ವಿದ್ಯುತ್ ಸಂಪರ್ಕದ ಸಾಧ್ಯತೆ ಬಗ್ಗೆ ಸ್ಥಳ ಪರಿಶೀಲನೆಯಂ ಹಂತದಲ್ಲಿವೆ.

೨) ಹಲವು ಅರ್ಜಿಗಳು, ಸ್ಥಳ ಪರಿಶೀಲನೆ ಮಾಡಿದ ನಂತರ ಅಂದಾಜು ಪಟ್ಟಿಯು ತಯಾರಿಕೆ ಹಂತದಲ್ಲಿವೆ.

೩) ಹಲವು ಅರ್ಜಿಗಳು, ಅಂದಾಜು ಪಟ್ಟಿ ತಯಾರಿಕೆ ನಂತರ ಮಂಜೂರಾತಿಗಾಗಿ ಉಪ ವಿಭಾಗ, ವಿಭಾಗ ವೃತ್ತ ಮತ್ತು ವಲಯ ಕಛೇರಿಗಳ ಪರಿಶೀಲನೆಯಲ್ಲಿವೆ.

ವರದಿಗಳನ್ನು ಒಪ್ಪಿಸುವುದು

ಉಪಾಧ್ಯಕ್ಷರು.— ಮಾನ್ಯ ಅಧ್ಯಕ್ಷರೇ ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಮೊದಲನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ

ಶ್ರೀ ಕೆ. ಕುಶಾಲ — ಮಾನ್ಯ ಅಧ್ಯಕ್ಷರೇ ಈ ಸದನವು ವರದಿಯನ್ನು ಒಪ್ಪುವುತ್ತದೆ ಎಂದು ನಾನು ಸೂಚಿಸುತ್ತೇನೆ.

ಅಧ್ಯಕ್ಷರು.— ಒಪ್ಪಿಸಲಾಯಿತು.

ಮೈಸೂರಿನಲ್ಲಿ ನಡೆದ ಗಲಭೆಯ ಬಗ್ಗೆ

† ಶ್ರೀ ಪಿ ಜಿ.ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೇ ಒಂದು ವಿಚಾರವನ್ನು ನಾನು ತಮ್ಮ ಪರವಾನಗಿಯನ್ನು ಪಡೆದು ಸರ್ಕಾರದಿಂದ ಉತ್ತರವನ್ನು ನಿರೀಕ್ಷೆ ಮಾಡಿದ್ದೆ. ಮಾನ್ಯ ಸಭಾ ನಾಯಕರು ಇಪ್ಪತ್ತು ದಿವಸಗಳಲ್ಲಿ ಹೇಳಿದ್ದಾರೆ ಎಂದು ಪತ್ರಿಕೆಗಳಲ್ಲಿ ಪ್ರಕಟ ಆಗಿದೆ. ಆದ್ದರಿಂದ ಈ

† ಈ ಚಿಹ್ನೆ ಸಂಬಂಧಪಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.